ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೬೧	ಬೆಂಗಳೂರು, ಗುರುವಾರ, ೦೯, ಏಪ್ರಿಲ್, ೨೦೨೬(ಚೈತ್ರ, ೧೯, ಶಕವರ್ಷ, ೧೯೪೮)	ಸಂಚಿಕೆ ೬೮
Volume 161	BENGALURU, THURSDAY, 09, APRIL, 2026(CHAITHRA, 19, SHAKAVARSHA, 1948)	Issue 68

ಭಾಗ ೩
ಸರ್ಕಾರದ ಆಯಾ ಇಲಾಖೆಗಳ ಮುಖ್ಯಸ್ಥರ ಮತ್ತು ಸ್ಥಳೀಯ ಪ್ರಾಧಿಕಾರಿಗಳಿಗೆ ಸಂಬಂಧಿಸಿದ ಅಧಿಸೂಚನೆಗಳು

ಕರ್ನಾಟಕ ಸರ್ಕಾರ

ಸಂಖ್ಯೆ:RD-LGK/38/2025
(E-1911172)

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಡಾ.ಬಿ.ಆರ್. ಅಂಬೇಡ್ಕರ್ ವೀದಿ
ಬೆಂಗಳೂರು, ದಿನಾಂಕ: 09.04.2026.

ನಮೂನೆ 27

68(1)ನೇಯ ಪ್ರಕರಣ ನಿಯಮ 94 ರನ್ವಯ ಘೋಷಣೆ

ಸರ್ಕಾರದ ಸ್ವತ್ತಾಗಿರುವ ಹಾಗೂ ಈ ಕೆಳಗಿನ ಅನುಸೂಚಿಯಲ್ಲಿ ನಿರ್ದಿಷ್ಟ ಪಡಿಸಿದ ಸಾರ್ವಜನಿಕ ಭಾಗವು ಸಾರ್ವಜನಿಕರ ಉಪಯೋಗಕ್ಕೆ ಅಗತ್ಯವಿಲ್ಲವೆಂದು ರಾಜ್ಯ ಸರ್ಕಾರಕ್ಕೆ ಕಂಡು ಬಂದಿರುವುದರಿಂದ, ಈಗ ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ 68 ನೇ ಪ್ರಕರಣದ (1) ನೇ ಉಪ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರಕಾರವು ಸಾರ್ವಜನಿಕ ಭಾಗವು ಸಾರ್ವಜನಿಕರ ಉಪಯೋಗಕ್ಕೆ ಅಗತ್ಯವಿಲ್ಲವೆಂದು ಮತ್ತು ಸಾರ್ವಜನಿಕ ಭಾಗವು ಅಥವಾ ಅದರ ಮೇಲೆ ಸಾರ್ವಜನಿಕರ ಹಾಗೂ ಎಲ್ಲಾ ವ್ಯಕ್ತಿಗಳ ಹಕ್ಕುಗಳು ಕೊನೆಗೊಳ್ಳತಕ್ಕುದೆಂದು ಉದ್ದೇಶಿಸಿ ಈ ಮೂಲಕ ಘೋಷಿಸುತ್ತದೆ.

2. ಸಾರ್ವಜನಿಕ ಹಕ್ಕಿನ ಜೊತೆಗೆ ಸದರಿ ಭಾಗದಲ್ಲಿ ಅಥವಾ ಅದರ ಮೇಲೆ ಹಿತಾಸಕ್ತಿಯುಳ್ಳ ಅಥವಾ ಹಕ್ಕುಳ್ಳ ಅಥವಾ ಈ ಉದ್ದೇಶದಿಂದ ಪ್ರತಿಕೂಲ ಪರಿಣಾಮಕ್ಕೊಳಗಾಗುವ ಸಂಭವವಿರುವ ಇತರ ಯಾವುದೇ ಹಿತಾಸಕ್ತಿಯನ್ನು ಹೊಂದಿರುವ ಯಾವನೇ ಸಾರ್ವಜನಿಕನು ಅಥವಾ ಯಾವನೇ ವ್ಯಕ್ತಿಯು, ಈ ಅಧಿಸೂಚನೆಯನ್ನು ಹೊರಡಿಸಿದ ಮೂವತ್ತು ದಿನದೊಳಗೆ ಸದರಿ ಉದ್ದೇಶದ ಬಗ್ಗೆ ತನ್ನ ಆಕ್ಷೇಪಣೆಗಳನ್ನು, ಅಂಥ ಹಿತಾಸಕ್ತಿಯ ಅಥವಾ ಹಕ್ಕಿನ ಸ್ವರೂಪವನ್ನು ಮತ್ತು ಪ್ರತಿಕೂಲ ಪರಿಣಾಮವು ಸಂಭವಿಸಿರಬಹುದಾದ ರೀತಿಯನ್ನು ಮತ್ತು ಅಂಥ ಹಿತಾಸಕ್ತಿ ಅಥವಾ ಹಕ್ಕಿನ ಬಗ್ಗೆ ನಷ್ಟ ಪರಿಹಾರಕ್ಕಾಗಿ ಕ್ಲೇಮು ಮಾಡಲಾದ ಮೊಬಲಗು ಮತ್ತು ವಿವರಗಳನ್ನು ಜಿಲ್ಲೆಯ ಜಿಲ್ಲಾಧಿಕಾರಿಯವರಿಗೆ ಬರಹದಲ್ಲಿ ತಿಳಿಸತಕ್ಕದ್ದು ಮತ್ತು ಸದರಿ ಆಕ್ಷೇಪಣೆಗಳನ್ನು ಮತ್ತು ಕ್ಲೇಮುಗಳನ್ನು ಸದರಿ ಪ್ರಕರಣಗಳಲ್ಲಿ ಉಪಬಂಧಿಸಿರುವಂತೆ ಜಿಲ್ಲಾಧಿಕಾರಿಯವರು ಪರಿಶೀಲಿಸತಕ್ಕದ್ದು.

ಅನುಸೂಚಿ

ರಸ್ತೆಯ ಭಾಗ ಇತ್ಯಾದಿ ಇರುವ ಗ್ರಾಮ	ಬಸವನತ್ತ ಗ್ರಾಮ, ಕಸಬಾ ಹೋಬಳಿ
ತಾಲ್ಲೂಕು	ಕೋಲಾರ
ಜಿಲ್ಲೆ	ಕೋಲಾರ
ರಸ್ತೆಯ ಮೊದಲಾದುದರ ಭಾಗ ಅಥವಾ ಭಾಗಗಳ ವರ್ಣನೆ	ಬಸವನತ್ತ ಗ್ರಾಮದ ಸನಂ 42/2ಬಿ ರಲ್ಲಿ 0-04 ಗುಂಟೆ ಜಮೀನನ್ನು ಸರ್ಕಾರಿ "ಬಿ" ಖರಾಬ್ ಎಂಬುದಾಗಿ ವರ್ಗೀಕರಿಸಲಾಗಿದೆ.
ರಸ್ತೆಯ ಭಾಗ ಅಥವಾ ಭಾಗಗಳ ಸರಿ ಸುಮಾರು ವಿಸ್ತೀರ್ಣ	ಸನಂ 42/2ಬಿ ರಲ್ಲಿ ಬ ಖರಾಬ್ 0-04 ಗುಂಟೆ
ಮೇರೆ	**ಗ್ರಾಮ ನಕಾಶೆಯಂತೆ** ಚೆಕ್‌ಬಂದಿ ಪೂರ್ವ-ಸರ್ವೆ ನಂ 43 ಪಶ್ಚಿಮ-ರಸ್ತೆ ಉತ್ತರ-ಸರ್ವೆ ನಂ. 39, 41 ದಕ್ಷಿಣ- ಸರ್ವೆ ನಂ.44
ಸಾರ್ವಜನಿಕ ರಸ್ತೆ/ಬೀದಿ/ಗಲ್ಲಿ/ದಾರಿ ಅಥವಾ ಅದರ ಭಾಗ	0-04 ಗುಂಟೆ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮಹಾಂತಯ್ಯ ಎಸ್. ಹೊಸಮಠ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ
(ಭೂ ಮಂಜೂರಾತಿ-1)

PR-533

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಒ 273 ಎಂಆರ್‌ಇ 2025

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ,
ಡಾ//ಬಿ.ಆರ್ ಅಂಬೇಡ್ಕರ್, ವೀಧಿ,
ಬೆಂಗಳೂರು, ದಿನಾಂಕ:26.02.2026

ಅಧಿಸೂಚನೆ

ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ರ ಕಲಂ 145ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ವಿಜಯಪುರ ಜಿಲ್ಲೆ, ತಾಳಿಕೋಟೆ ತಾಲ್ಲೂಕು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮಾರುಕಟ್ಟೆ ಕ್ಷೇತ್ರವನ್ನು ವಿಭಜಿಸಿ **ಮುದ್ದೇಬಿಹಾಳ ತಾಲ್ಲೂಕಿಗೆ** ಹೊಸದಾಗಿ **ಪ್ರತ್ಯೇಕ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ರಚಿಸಲು ಹಾಗೂ** 93 ಅಧಿಸೂಚಿತ ಕೃಷಿ ಉತ್ಪನ್ನಗಳ ಮಾರಾಟ ನಿಯಂತ್ರಣಕ್ಕೆ ಒಳಪಡಿಸಲು ಉದ್ದೇಶಿಸಿದೆ.

ಆದ್ದರಿಂದ, ಮೇಲ್ಕಂಡ ಉದ್ದೇಶಿತ ಪ್ರಸ್ತಾವನೆಗೆ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ 1966ರ ಕಲಂ 03 ರನ್ವಯ ಆಕ್ಷೇಪಣೆ / ಸಲಹೆಗಳನ್ನು ಆಹ್ವಾನಿಸಿದ್ದು, ಯಾವುದೇ ಆಕ್ಷೇಪಣೆಗಳು/ ಸಲಹೆಗಳು ಇದ್ದಲ್ಲಿ, ಈ ಅಧಿಸೂಚನೆಯು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಅಥವಾ ಕನ್ನಡ ದಿನಪತ್ರಿಕೆಯಲ್ಲಿ ಯಾವುದರಲ್ಲಿ ತಡವಾಗಿ ಪ್ರಕಟವಾಗುವುದೋ, ಆ ದಿನಾಂಕದಿಂದ 30 ದಿವಸದೊಳಗಾಗಿ ಸರ್ಕಾರದ ಕಾರ್ಯದರ್ಶಿ, ಕೊಠಡಿ ಸಂಖ್ಯೆ:610, 6ನೇ ಮಹಡಿ, 3ನೇ ಗೇಟ್, ಸಹಕಾರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು- 560 001 ಇವರಿಗೆ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಜಿ.ಎನ್.ಧನಲಕ್ಷ್ಮಿ)
ಸರ್ಕಾರದ ಅಧೀನ ಕಾರ್ಯದರ್ಶಿ-1
ಸಹಕಾರ ಇಲಾಖೆ.

PR-534

IN THE COURT OF CIVIL JUDGE AND JMFC AT BAGEPALLI, CHIKKABALLAPURA DISTRICT.

It is hereby notified to the general public that the following unclaimed vehicles are in the custody of **Chelure Police Station** which are seized under various Cases

SL NO.	C MISS NO.	PF NO.	REGISTRATION NUMBER.	TYPE OF VEHICLE	ENGINE NUMBER AND CHASSI NUMBER
1.	01/2025	111/2025	NO NUMBER	BAJAJ PULSER	DHYWJK57220 MD2A11CY6JWK08353
2.	03/2025	113/2025	NO NUMBER	HONDA SHINE	JC73E80081396 ME4JC732EG8038577
3.	04/2025	114/2025	NO NUMBER	HERO HONDA SPLENDOR	02A18E46501 02A20F46758
4.	05/2025	115/2025	NO NUMBER	YAMAHA SCOOTY	E3Y3E0712759 ME1SED1U4K0007395

Any persons having rights to claim the above vehicles shall approach to **Chelure Police Station** with necessary documents within 15 days from the date of this publication failing which the above vehicles will be confiscated to government.

Any claims received after the due date will not be entertained.

Sd/-

Civil Judge & JMFC
Bagepalli.

PLACE: Chikkaballapura

PR-535

In The court Of Senior Civil Judge & JMFC Turuvekere.

It is here by notified to the public that the Turuvekere police station in Tumakuru District, have seized the following vehicles as Crime Cases, Hence the owners of the vehicles are here by informed to put their claim within one month of the date of this Notification otherwise auction will be conducted if no one came before as owners of the below said vehicles within the prescribed time.

List of the unclaimed vehicles are in Turuvekere Police Station Tumakuru District which have been seized under Crime Cases are as follows

Sl No	Vehical Details	CR NO	PF NO	Charsis No	Engine No
1.	KA 03 EK 4854 (FAKE NUMBER) KA 03EK 4554 (ORIGINAL)	201/2025	161/2025	ME4JF085338278595	-
2.	KA 02 JZ 8901	201/2025	161/2025	MD2B44BY5KWL01073	JZYWKL39895
3.	KA 03 HA 4552	201/2025	161/2025	MD634KE4572H21555	0E4H72022133
4.	KA 05 EN 5492	201/2025	161/2025	03E20C33801	03E18M35313
5.	KA 04 V 7951	201/2025	161/2025	98J10F06019	98J10E10341
6.	KA 05 ES 2441	201/2025	161/2025	DUFBLB51197	DUMBLB02187
7.	KA 05 HD 2093	201/2025	161/2025	MD625KF5671D73391	BFID71144657
8.	KA 01 X 5900	201/2025	161/2025	ME4KC094L48014083	KC09E0014701
9.	Not registered	201/2025	161/2025	ME4JF5050GT248594	JF50LT3248826
10.	KA04 HU 8047 (ORIGINAL) KA 44 J 2346 (FAKE)	201/2025	161/2025	MD2A11CZ5ECE52224	DHZCE30053
11.	KA 51 Q 7898	201/2025	161/2025	07M16F20676	07M15E17781
12.	KA 09 B 0089	201/2025	161/2025	MD2AA2-4ZZPWJ52283	AEMBPJ56045
13.	KA 03 EM 7367	201/2025	161/2025	133489	182208
14.	KA 52 2021	201/2025	161/2025	600137DSZP69575	475IDI03DSZP66466

15.	KA 41 C 2017 (Fake) KA 01AE4672 (Original)	201/2025	161/2025	MAT600185FTF08915	475IDI03FUYP34841
16.	KA 04 P 1506	201/2025	161/2025	SB3081N2185201	F8B1N1786087
17.	KA 27 B 4011	03/2021	-	MBX0000ZBSK988185	R4K2560450

Date :02-04-2025

Turuvekere PS

Smt:M.D .Pavithra
Senior Civil Judge & JMFC Court
Turuvekere

PR-536

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಐ 24 ಸಿಓಎಫ್ 2024

ಕರ್ನಾಟಕ ಸರ್ಕಾರ ಸಚಿವಾಲಯ
ವಿಕಾಸಸೌಧ
ಬೆಂಗಳೂರು, ದಿನಾಂಕ:31.03.2026

ಅಧಿಸೂಚನೆ

ಶ್ರೀಮತಿ ಮನುಜಶ್ರೀ ವೈ.ಸಿ., ಸಹಾಯಕ ನಿರ್ದೇಶಕರು, ಯೋಜನಾ ಇಲಾಖೆ ಇವರನ್ನು ದಿ ಮೈಸೂರು ಷುಗರ್ ಕಂಪನಿ ಲಿ., ಮಂಡ್ಯ ಕಂಪನಿಯ ಮುಖ್ಯ ಆಡಳಿತಾಧಿಕಾರಿಯನ್ನಾಗಿ ನಿಯೋಜಿಸಲಾಗಿರುವುದನ್ನು ರದ್ದುಪಡಿಸಿ, ಯೋಜನಾ ಇಲಾಖೆಗೆ ಹಿಂದಿರುಗಿಸಿ ಸರ್ಕಾರದ ಅಧಿಸೂಚನೆ ಸಂ:ಸಿಐ 24 ಸಿಓಎಫ್ 2024, ದಿನಾಂಕ:11.03.2025 ರಲ್ಲಿ ಆದೇಶಿಸಲಾಗಿರುತ್ತದೆ.

ಸದರಿ ಅಧಿಸೂಚನೆಯನ್ನು ಪ್ರಶ್ನಿಸಿ ಶ್ರೀಮತಿ ಮನುಜಶ್ರೀ ವೈ.ಸಿ., ಇವರು ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ದಾಖಲಿಸಿದ್ದ ಅರ್ಜಿ ಸಂ:890/2025 ರಲ್ಲಿ ಮಾನ್ಯ ನ್ಯಾಯಾಲಯವು ತಡೆಯಾಜ್ಞೆ ನೀಡಿದ್ದು, ನಂತರ ದಿನಾಂಕ:02.03.2026 ರ ಆದೇಶದಲ್ಲಿ ಅರ್ಜಿಯನ್ನು ವಜಾಗೊಳಿಸಿರುತ್ತದೆ.

ಆದ್ದರಿಂದ, ಶ್ರೀಮತಿ ಮನುಜಶ್ರೀ ವೈ.ಸಿ., ಸಹಾಯಕ ನಿರ್ದೇಶಕರು ಇವರಿಗೆ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯಲ್ಲಿ ವರದಿ ಮಾಡಿಕೊಳ್ಳಲು ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಪವಿತ್ರ)
ಸರ್ಕಾರದ ಅಧೀನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸಕ್ಕರೆ)

PR-537

ನಮೂನೆ-V

ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು

[ಕರ್ನಾಟಕ ತಿದ್ದುಪಡಿ ನಿಯಮ-5, 20(1) (ಬಿ)]

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ-2013ರ ಕಲಂ-11(1) ರ ಮೇರೆಗೆ ಅಧಿಸೂಚನೆ.

ಸಂಖ್ಯೆ:- ಕಗೃಮಂ/ ಭೂಸ್ವಾಪಿ/ಬೆಳಗಾವಿ/ಮರಕಟ್ಟಿ/43/2025-26 ದಿನಾಂಕ:-31-03-2026

ಸಾರ್ವಜನಿಕ ಉದ್ದೇಶದ ವಸತಿ ಯೋಜನೆಗಾಗಿ ಬೆಳಗಾವಿ ಜಿಲ್ಲೆ, ಬೈಲಹೊಂಗಲ ತಾಲ್ಲೂಕು, ನೇಸರಗಿ ಹೋಬಳಿ, ಮರಕಟ್ಟಿ ಗ್ರಾಮದ ಈ ಕೆಳಗಿನ ಅನುಸೂಚಿಯಲ್ಲಿ ಕಾಣಿಸಿರುವ ಜಮೀನುಗಳ ಸ್ವಾಧೀನತೆಯ ಅವಶ್ಯಕತೆಯಿರುತ್ತದೆಯೆಂದು ಸರ್ಕಾರವು ಭಾವಿಸುತ್ತದೆ. ಈ ಯೋಜನೆಗೆ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ-2013 (2013 ರ ಕೇಂದ್ರ ಅಧಿನಿಯಮ ಸಂಖ್ಯೆ: 30) ಕ್ಕೆ ಅನುಗುಣವಾಗಿ ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಂತೆ ದಿನಾಂಕ:- 23.07.2019 ರಿಂದ ಜಾರಿಗೆ ಬಂದಿರುವ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು ಪುನರ್ ವಸತಿ ಮತ್ತು ಪುನರ್ ನಿರ್ಮಾಣ (ಕರ್ನಾಟಕ ತಿದ್ದುಪಡಿ) ಕಾಯ್ದೆ-2019 (2019 ರ ಕರ್ನಾಟಕ ಅಧಿನಿಯಮ ಸಂಖ್ಯೆ:16) ರ ಕಲಂ-10(ಎ) ರಡಿ ಮೂಲ ಕಾಯ್ದೆಯ ಅಧ್ಯಾಯ II & III ರಲ್ಲಿನ ಉಪಬಂಧಗಳನ್ನು ಅನ್ವಯಿಸುವುದರಿಂದ ವಿನಾಯಿತಿ ನೀಡಿ ಸರ್ಕಾರದ ಸಂಖ್ಯೆ:- ಕಂ.ಇ 02 ಎ ಕ್ಯೂ ಎಲ್ 2026 ದಿ:-24-02-2026 ರಲ್ಲಿ ಸರ್ಕಾರದ ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ಈ ಅಧಿಸೂಚನೆ ರಾಜ್ಯ ಪತ್ರದಲ್ಲಿ ದಿನಾಂಕ 04-03-2026 ರಂದು ಪ್ರಕಟವಾಗಿರುತ್ತದೆ.

ಆದುದರಿಂದ ಈ ಮೂಲಕ ತಿಳಿಸುವುದೇನೆಂದರೆ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ-2013 (2013 ರಕೇಂದ್ರ ಅಧಿನಿಯಮ ಸಂಖ್ಯೆ:30)ರ ಕಲಂ 12 ಮೇರೆಗೆ ಪ್ರದತ್ತವಾದ ಅಧಿಕಾರ ಚಲಾಯಿಸುವಂತೆ ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು ಇವರಿಗೆ ಅಧಿಕಾರ ನೀಡಲಾಗಿದೆ.

ಈ ಜಮೀನುಗಳ ಸ್ವಾಧೀನ ಕೆಲಸ ನಿರ್ವಹಿಸುವಲ್ಲಿ ಸರ್ಕಾರದಿಂದ ನೇಮಿಸಲ್ಪಟ್ಟ ಮೋಜಣಿದಾರರಿಗಾಗಲಿ ಅಥವಾ ಈ ಕೆಲಸ ಮಾಡುವವರಿಗಾಗಲೀ ಯಾರೂ ಅಡ್ಡಿ ಮಾಡಕೂಡದೆಂದು ಎಚ್ಚರಿಸಲಾಗಿದೆ. ಭೂ ಸ್ವಾಧೀನ ಪ್ರಕ್ರಿಯಲ್ಲಿ ಪಾರದರ್ಶಕತೆ , ಸೂಕ್ತ ಪರಿಹಾರದ ಹಕ್ಕು ,ಪುನರ್ ವಸತಿ ಮತ್ತು ಪುನರ್ ನಿರ್ಮಾಣದ ಕಾಯ್ದೆ-2013 (2013ರ ಕೇಂದ್ರ ಅಧಿನಿಯಮದ ಸಂಖ್ಯೆ 30) ರ ಕಲಂ-11(1) ಮೇರೆಗೆ ಈ ಅಧಿಸೂಚನೆ ಪ್ರಕಟಗೊಂಡ ದಿನಾಂಕದಿಂದ ಸದರಿ ಭೂ ಸ್ವಾಧೀನಪಡಿಸಿಕೊಳ್ಳಲಿರುವ ಭೂಮಿಯನ್ನು ಒಪ್ಪಂದದ ಮೇರೆಗೆ ವಿಕ್ರಯಿಸುವ ,ಬೋಗಕ್ಕೆ ಅಡವಿಡುವ, ಅನುಭವಿಸುವ, ಬದಲಾಯಿಸುವ ಅಥವಾ ಇನ್ನೂ ಯಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳದಂತೆ ನಿರ್ಭಂದಿಸಿದೆ. ಅಂತಹ ಯಾವುದೇ ಕ್ರಮ ಅಥವಾ ಇನ್ಯಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಲ್ಲಿ ಅದನ್ನು ಐತೀರ್ಪು ರಚಿಸುವಾಗ ಗಣನೆಗೆ ತೆಗೆದುಕೊಳ್ಳದೇ ಅಂತಿಮವಾಗಿ ಸದರಿ ಕಾಯ್ದೆಯನ್ವಯ ಭೂ ಸ್ವಾಧೀನಡಿಸಿಕೊಳ್ಳಲಾಗುವುದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು ಪುನರ್ ವಸತಿ ಮತ್ತು ಪುನರ್ ರ್ನಿರ್ಮಾಣ ಕಾಯ್ದೆ-2013 (2013 ರ ಕೇಂದ್ರ ಅಧಿನಿಯಮ ಸಂಖ್ಯೆ: 30) ರ ಕಲಂ 15(1)ರ ಮೇರೆಗೆ ಆಸಕ್ತಿಯುಳ್ಳವರು ತಮ್ಮ ಆಕ್ಷೇಪವಿದ್ದಲ್ಲಿ ಆಕ್ಷೇಪಣೆಗಳನ್ನು ಈ ಅಧಿಸೂಚನೆ ಪ್ರಕಟಗೊಂಡ 60 ದಿನಗಳೊಳಗಾಗಿ ಈ ಕಾರ್ಯಾಲಯಕ್ಕೆ ಸಲ್ಲಿಸಬೇಕು. ತದನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಯಾವುದೇ ಮುನ್ಸೂಚನೆ ನೀಡದೇ ವಿಲೇಯಕ್ಕೆ ಹಾಕಲಾಗುವುದು.

ಸದರಿ ಪ್ರಕರಣದಲ್ಲಿ ಭೂಸ್ವಾಧೀನಕ್ಕೆ ಒಳಪಡುವ ಜಮೀನಿನ ಒಂದು ನಕ್ಷೆಯನ್ನು ವಿಶೇಷ ಭೂಸ್ವಾಧೀನಾಧಿಕಾರಿ-2, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು ಇವರ ಕಾರ್ಯಾಲಯದಲ್ಲಿ ಪರೀಶೀಲನೆಗಾಗಿ ಇಡಲಾಗಿದೆ.

ಅನುಸೂಚಿ

ಜಿಲ್ಲೆ:-ಬೆಳಗಾವಿ ತಾಲ್ಲೂಕು:-ಬೈಲಹೊಂಗಲ ಹೋಬಳಿ:-ನೇಸರಗಿ ಗ್ರಾಮ:- ಮರಕಟ್ಟಿ

ಕ್ರ ಸಂ	ಪಹಣಿಯಂತೆ ಖಾತೆದಾರರ ಹೆಸರು		ಸರ್ವೆ / ಖಾತಾ ನಂಬರ್	ಸರ್ವೆ ಖಾತಾ ನಂಬರಿನಲ್ಲಿನ ಒಟ್ಟು ವಿಸ್ತೀರ್ಣ (ಪಹಣಿ/ಉತಾರ ಅನ್ವಯ)		ಸ್ವಾಧೀನಕ್ಕೊಳಪಡುವ ಒಟ್ಟು ವಿಸ್ತೀರ್ಣ		ತರಹೆ	ಚಕ್ಕುಬಂದಿ / ಸರಹದ್ದು				ಷರಾ
	ಭೂಮಾಲೀಕರು/ ಹಿಡುವಳಿದಾರರ ಹೆಸರು	ಅನುಭವದಾರರ ಹೆಸರು		ಕೃಷಿ/ ಕೃಷಿಯೇತರ ಜಮೀನು (ಎ-ಗು)	ಖರಾಬು (ಎ-ಗು)	ಕೃಷಿ/ಕೃಷಿಯೇತರ ಜಮೀನು	ಖರಾಬು (ಎ-ಗು)		ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ	
1	2	3	4	5	6	7	8	9	10	11	12	13	14
1	ಭಾಗವಾನ ಅನಿಸಾ ನಾಶೀರುದ್ದೀನ – ಭೂ ಪ	ಭಾಗವಾನ ಅನಿಸಾ ನಾಶೀರುದ್ದೀನ – ಭೂ ಪ	21/1	8-15	0-28	7-27	0-28	ಖುಷ್ಕಿ	ಮಾರಿಹಾಳ ಗ್ರಾಮ ಗಡಿ ಸ ನಂ.22	ಹೊನ್ನಿಹಾಳ ಗ್ರಾಮ ಗಡಿ	ಹೊನ್ನಿಹಾಳ ಗ್ರಾಮ ಗಡಿ	ಸ ನಂ. 21/2	
2	ಭಾಗವಾನ ಅನಿಸಾ ನಾಶೀರುದ್ದೀನ – ಭೂ ಪ	ಭಾಗವಾನ ಅನಿಸಾ ನಾಶೀರುದ್ದೀನ – ಭೂ ಪ	21/2	8-16	0-29	7-27	0-29	ಖುಷ್ಕಿ	ಸ ನಂ 22	ಹೊನ್ನಿಹಾಳ ಗ್ರಾಮ ಗಡಿ, ಸಿದ್ಧಾಪುರ ಗ್ರಾಮ ಗಡಿ	ಸ ನಂ 21/1	ಸ ನಂ 21/3	
3	ಭಾಗವಾನ ಅನಿಸಾ ನಾಶೀರುದ್ದೀನ – ಭೂ ಪ	ಭಾಗವಾನ ಅನಿಸಾ ನಾಶೀರುದ್ದೀನ – ಭೂ ಪ	21/2	8-16	0-29	7-27	0-29	ಖುಷ್ಕಿ	ಸ ನಂ 22	ಸಿದ್ಧಾಪುರ ಗ್ರಾಮ ಗಡಿ	ಸ ನಂ 21/2	ಸ ನಂ 18, 19, 20	
ಒಟ್ಟು				25-07	02-06	23-01	02-06						

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

ಫೋಷಾ್ವರೆ

ಕ್ರ ಸಂ	ಗ್ರಾಮಗಳು	ಜಾತಾ ವಿಸ್ತೀರ್ಣ (ಎ-ಗು)		ಖರಾಬು ಎ-ಗು		ಒಟ್ಟು ವಿಸ್ತೀರ್ಣ ಎ-ಗು	
1	ಮರಕಟ್ಟಿ	23	01	02	06	25	07

(ವಿ.ಸೂ: ಅಧಿಸೂಚನೆಯಲ್ಲಿ ತಿಳಿಸಿರುವಂತೆ ಆಸಕ್ತಿಯುಳ್ಳವರು ತಮ್ಮ ಆಕ್ಷೇಪಣಾ ಅರ್ಜಿಯಲ್ಲಿ ಅಂಚೆ ವಿಳಾಸ ಮತ್ತು ಮೊಬೈಲ್ ನಂಬರನ್ನು ತಪ್ಪದೇ ಸ್ಪಷ್ಟವಾಗಿ ನಮೂದಿಸಿ ಸಲ್ಲಿಸುವುದು)

ಗೃಹ ಆಯುಕ್ತರು
ಕರ್ನಾಟಕ ಗೃಹ ಮಂಡಳಿ
ಬೆಂಗಳೂರು

PD-33

THAMMAIAH
Digitally signed by THAMMAIAH
DN: c=IN, o=Centre for e-Governance, 2.5.4.20=be54f34fe51eae50203ca7fab5cab379ff20ab9460a2582bf282f04d43b8f8b16, ou=department of printing stationery and Publication,CID-1948443, postalCode=560001, st=Karnataka, serialNumber=4d9b284dc13d38f142f5f0485de07dd86efa302a3fce3729edd6ea0c1b5098e0, cn=THAMMAIAH
Date: 2026.04.09 18:08:50 +05'30'